ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/41 /2022-23

ದಿನಾಂಕ: 21.04.2022

**-:ದಿನಾಂಕ:13.04.2022 ರಂದು ನಡೆದ 82-ಗರುಡಾಚಾರ್‌ಪಾಳ್ಯ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:13.04.2022ರ ಶನಿವಾರ ಅಪರಾಹ್ನ 3.00 ಘಂಟೆಗೆ ವಾರ್ಡ್ ನಂ.82-ಗರುಡಾಚಾರ್‌ಪಾಳ್ಯ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಧವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ.ಆರ್.ವೆಂಕಟಾಚಲಪತಿ | ಮಾನ್ಯ ಜಂಟಿ ಆಯುಕ್ತರು/ ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು ವಾರ್ಡ್-82 | ಹಾಜರಿದ್ದರು. |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು/ ವಾರ್ಡ್ ಸ.ಅ. ವಾರ್ಡ್.ನಂ-82 | ಹಾಜರಿದ್ದರು. |
| 3 | ಶ್ರೀ.ಲಕ್ಷ್ಮೀನಾರಯಣ | ಕಂದಾಯ ನೀರಿಕ್ಷರು | ಹಾಜರಿದ್ದರು. |
| 4 | ಶ್ರೀ.ನಲ್ಲಪ್ಪ | ಕಂದಾಯ ನೀರಿಕ್ಷರು | ಹಾಜರಿದ್ದರು. |
| 5 | ಶ್ರೀ.ಅಶ್ವೀನ್ ಕುಮಾರ್ | ಸ.ಅ. ವಾಡ್-82 (ಗುತ್ತಿಗೆ) | ಹಾಜರಿದ್ದರು. |
| 6 | ಶ್ರೀ.ಶೇಷಗೀರಿ | ಕಿರಿಯ ಆರೋಗ್ಯ ನೀರಿಕ್ಷಕರು, | ಹಾಜರಿದ್ದರು. |
| 7 | ಶ್ರೀ.ವಿನಯ್ ಕುಮಾರ್ ಕೆ | ಕಲ್ಯಾಣ ಇಲಾಖೆ | ಹಾಜರಿದ್ದರು. |
| 8 | ಶ್ರೀ.ಮಧು | ಸೂಪರ್‌ವೈಜರ್ ಎಸ್.ಡಬ್ಲ್ಯೂ.ಎಂ | ಹಾಜರಿದ್ದರು. |
| 9 | ಶ್ರೀ.ಶಿವರಾಜ್ ಎಲ್ | ಮಾರ್ಶಲ್ | ಹಾಜರಿದ್ದರು. |
| 10 | ಶ್ರೀ. ಟಿ.ಅಂಬರೀಶ್ | ಸಾರ್ವಜನಿಕರು | ಹಾಜರಿದ್ದರು. |
| 11 | ಶ್ರೀ. ಬಾಸ್ಕರ್ | ಸೂಪರ್‌ವೈಜರ್ ಎಸ್.ಡಬ್ಲ್ಯೂ.ಎಂ | ಹಾಜರಿದ್ದರು. |
| 12 | ಶ್ರೀ. ನಾಗರತ್ನಮ್ಮ | ಸಾರ್ವಜನಿಕರು | ಹಾಜರಿದ್ದರು. |
| 13 | ಶ್ರೀ. ಸುನೀಲ್ ರೆಡ್ಡಿ | ಸಾರ್ವಜನಿಕರು | ಹಾಜರಿದ್ದರು. |
| 14 | ಶ್ರೀ. ನರೇಂದ್ರ | ಸಾರ್ವಜನಿಕರು | ಹಾಜರಿದ್ದರು. |
| 15 | ಶ್ರೀ.ಶ್ರೀನೀವಾಸ ರಾಜು | ಸಾರ್ವಜನಿಕರು | ಹಾಜರಿದ್ದರು. |
| 16 | ಶ್ರೀ.ಎಸ್.ಕೆ ಶೀವಣ್ಣ | ಸಾರ್ವಜನಿಕರು | ಹಾಜರಿದ್ದರು. |
| 17 | ಶ್ರೀ.ವೆಂಕಟಾ.ಜಿ | ಸಾರ್ವಜನಿಕರು | ಹಾಜರಿದ್ದರು. |
| 18 | ಶ್ರೀ. ಮಂಜುನಾಥ್ | ಸಾರ್ವಜನಿಕರು | ಹಾಜರಿದ್ದರು. |

Scanned with CamScanner

...ಯ ನಡುವಳಿಗಳು:

| ಕ್ರ.ಸಂ | ವಿಷಯ | ತೀರ್ಮಾನ |
|---|---|---|
| 1 | ಸಿ.ಸಿ ಕ್ಯಾಮರ ಅಳವಡಿಸುವ ಬಗ್ಗೆ. | 1. ಕಾವೇರಿನಗರ, ಅಂಬೇಡ್ಕರ್‌ಭವನ ಮತ್ತು ಚಿಕ್ಕಣ್ಣ ಲೇಔಟ್‌ಗಳಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿರುತ್ತದೆ ಎಂದು ಅಲ್ಲಿನ ಸಾರ್ವಜನಿಕರು ತಿಳಿಸಿದರು. ಅದರಂತೆ ವಾರ್ಡಿನ ಸದಸ್ಯರು ಆಯಾ ಸ್ಥಳಗಳಲ್ಲಿ ಸಿ.ಸಿ. ಕ್ಯಾಮರ ಅಳವಡಿಸಲು ಮಾನ್ಯ ಅಧ್ಯಕ್ಷರ ಗಮನಕ್ಕೆ ತರುತ್ತಾ ಸಭೆಯಲ್ಲಿ ಸೂಚಿಸಿದರು.<br>2. ಈಗಾಗಲೇ ಸಿಸಿಕ್ಯಾಮರ ಸಂಬಂಧಿಸಿದಂತೆ ಅನುಮೋದನೆ ಗೊಂಡಿರುವ ಪ್ರತಿಯನ್ನು ನೀಡಲು ಕೊರಿದರು.<br>ಕ್ರಮ:<br>1. ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ.<br>2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಹದೇವಪುರ ಹೂಡಿ ಉಪವಿಭಾಗ ವಿಭಾಗ/ ಎಸ್.ಡಬ್ಲ್ಯೂ.ಎಂ ಸಹಾಯಕ ಕಾರ್ಯಪಾಲಕ ಅಭಿಯಂತರರು<br>3. ಸಹಾಯಕ ಅಭಿಯಂತರರು ವಾರ್ಡ್-82 |
| 2 | ಸಿ.ಸಿ ಕ್ಯಾಮರ ಹಸ್ತಾಂತರಿಸುವ ಬಗ್ಗೆ. | ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕೆಲವು ಸಿಸಿ ಕ್ಯಾಮರಗಳು ಪೋಲೀಸ್ ಇಲಾಖೆಗೆ ಹಸ್ತಾಂತರಿಸಿರುವುದಿಲ್ಲ ಎಂದು ಕಂಡು ಬಂದಿರುತ್ತದೆ. ಅದರಂತೆ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು.<br>ಕ್ರಮ: 1. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಹದೇವಪುರ ಹೂಡಿ ಉಪವಿಭಾಗ ವಿಭಾಗ.<br>2. ಸಹಾಯಕ ಅಭಿಯಂತರರು ವಾರ್ಡ್-82 |
| 3 | ಸೀತರಾಮ್ ಪಾಳ್ಯದಲ್ಲಿ ಡ್ರೈನೇಜ್ ಸ್ಲಾಬ್ ಅಳವಡಿಸುವ ಬಗ್ಗೆ | ಸೀತಾರಾಮ್‌ಪಾಳ್ಯ ವ್ಯಾಪ್ತಿಯಲ್ಲಿ ಕೆಲ ಡ್ರೈನೇಜಿನ ಸ್ಲಾಬ್‌ಗಳು ಇಲ್ಲದಿರುವುದನ್ನು ಸದಸ್ಯರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ ಅದರಂತೆ ಮಾನ್ಯ ಅಧ್ಯಕ್ಷರು ಸ್ಲಾಬ್‌ಗಳನ್ನು ಅಳವಡಿಸಲು ಸೂಚಿಸಿರುತ್ತಾರೆ.<br>ಕ್ರಮ:<br>1. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಹದೇವಪುರ ಹೂಡಿ ಉಪವಿಭಾಗ ವಿಭಾಗ.<br>2. ಸಹಾಯಕ ಅಭಿಯಂತರರು ವಾರ್ಡ್-82 |
| 4 | ಬೋರ್‌ವೆಲ್‌ಗಳನ್ನು ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆಗೆ ಹಸ್ತಾಂರಿಸುವ ಬಗ್ಗೆ. | ವಾರ್ಡಿನ ವ್ಯಾಪ್ತಿಯಲ್ಲಿ ಕೊರೆದಿರುವ ಬೋರ್‌ವೆಲ್‌ಗಳನ್ನು ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆಗೆ ಹಸ್ತಾಂರಿಸಿರುವುದಿಲ್ಲ ಎಂದು ಸದಸ್ಯರು ತಿಳಿಸಿರುತ್ತಾರೆ ಅದರಂತೆ ಮಾನ್ಯ ಅಧ್ಯಕ್ಷರು ಕೊಡಲೇ ಕ್ರಮ ಕೈಗೊಳ್ಳುಲು ಸೂಚಿಸಿದರು.<br>ಕ್ರಮ: 1. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಹದೇವಪುರ ಹೂಡಿ ಉಪವಿಭಾಗ ವಿಭಾಗ.<br>2. ಸಹಾಯಕ ಅಭಿಯಂತರರು ವಾರ್ಡ್-82 |
| 5 | ಗೋಶಾಲೆ ರಸ್ತೆಯಲ್ಲಿ ಡ್ರೈನೇಜ್ ಸಮಸ್ಯೆ ಕುರಿತು | ಗೋಶಾಲೆ ರಸ್ತೆಯಲ್ಲಿ ಡ್ರೈನೇಜ್ ಸಮಸ್ಯೆಯಾಗಿದ್ದು, ಡ್ರೈನೇಜಿನಿಂದ ಬೃಹತ್ ನೀರುಗಾಲುವೆಗೆ ಸಂಪರ್ಕ ಇಲ್ಲದಿರುವುದರಿಂದ ನೀರು ತುಂಬಿ ರಸ್ತೆಯ ಮೇಲೆ ಹರಿಯುತ್ತಿರುತ್ತದೆ ಎಂದು ಸಾರ್ವಜನಿಕರು ದೂರು ನೀಡಿರುತ್ತಾರೆ ಅದರಂತೆ ಮಾನ್ಯ ಅಧ್ಯಕ್ಷರು ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.<br>ಕ್ರಮ:<br>1. ಸಹಾಯಕ ಕಾರ್ಯಪಾಲಕ ಅಭಿಯಂತರರು ಮೇಜರ್ ರೋಡ್ |

Scanned with CamScanner

| | | |
|---|---|---|
| | ರಾಜಕಾಲುವೆ ಹಾಗೂ ಸ್ಮಶಾನದ ಒತ್ತುವರಿಯಾಗಿರುವ ಕುರಿತು | ಬಸವಣ್ಣನಗರದ ರಾಜಕಾಲುವೆ ಹಾಗೂ ಸ್ಮಶಾನದ ಜಾಗವನ್ನು ಒತ್ತುವರಿಯಾಗಿರುವುದನ್ನು ಸಭೆಯಲ್ಲಿ ಚರ್ಚಿಸಲಾಯಿತು. ಅದರಂತೆ ಅಧ್ಯಕ್ಷರು ಮಾನ್ಯ ತಹಶೀಲ್ದಾರ್ ರವರ ಗಮನಕ್ಕೆ ತರಲು ಸೂಚಿಸಿದರು.<br>ಕ್ರಮ.<br>1. ಮಾನ್ಯ ತಹಶೀಲ್ದಾರ್ ಕೆ.ಆರ್.ಪುರಂ. |
| 7 | ರಸ್ತೆ ಅಗದಿರುವ ಬಗ್ಗೆ | ಬೆಸ್ಕಾಂ ಹಾಗೂ ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆಯಿಂದ ಕಾಮಗಾರಿಯನ್ನು ಮಾಡಿಲಾಗಿದ್ದು ಆದರೆ ರಸ್ತೆಯನ್ನು ಅಗದಿರುವ ಭಾಗವನ್ನು ಮುಚ್ಚದೆ ಬಿಟ್ಟಿರುವುದು ಕಂಡುಬಂದಿರುತ್ತದೆ ಎಂದು ಸಭೆಯಲ್ಲಿ ಚರ್ಚಿಸಲಾಯಿತು. ಅದರಂತೆ ಅಧ್ಯಕ್ಷರು ಕ್ರಮಕೈಗೊಳ್ಳಲು ಸೂಚಿಸಿದರು.<br>ಕ್ರಮ:<br>1.ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ<br>2. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ |
| 8 | ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳ ಮಾಹಿತಿ ಕುರಿತು | ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ವಿವಿಧ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಮುಂದಿನ ಸಭೆಯಲ್ಲಿ ತಿಳಿಸಬೇಕಾಗಿ ಸಾರ್ವಜನಿಕರು ಕೋರಿರುತ್ತಾರೆ.<br>ಕ್ರಮ.<br>1.ಬಿಬಿಎಂಪಿ ಕಲ್ಯಾಣ ಇಲಾಖೆ |

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

ಮುಂಜಾಗ್ರತಾ ಕ್ರಮವಾಗಿ ಸಭೆ ಸಮಾರಂಬ ಮಾಡದಂತೆ ತಿಳಿಸಲಾಯಿತ್ತು ಹಾಗೂ ವ್ಯಾಕ್ಸಿನ್‌ನೇಶನ್ ಹಾಕಿಸಲು ಸ್ಥಳಿಯರಿಗೆ ಮುಂಜಾಗ್ರತೆ ವಹಿಸಿ ಕ್ರಮಕೈಗೊಳ್ಳಲು ತಿಳಿಸಿದರು.

Covid-19, ವ್ಯಾಕ್ಸಿನೇಷನ್, Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೊಡಲ್ ಅಧಿಕಾರಿ ಹಾಗೂ
ಜಂಟಿ ಆಯುಕ್ತರು ವಾರ್ಡ್-82. ಗರುಡಾಚಾರ್ ಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-82 ಗರುಡಾಚಾರ್ ಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

Scanned with CamScanner